ಒಳ್ಳೆಯ ಕಾಲೇಜಿನಲ್ಲೇ ಸೀಟು ದೊರಕಿತ್ತು. ನಂತರ ಸಲೀಸಾಗಿ ಸರ್ಕಾರೀ ಉದ್ಯೋಗ, ಹಿಂದೆಯೇ ಮದುವೆ, ಸಂಸಾರ ಕಂಡಾಗಿತ್ತು. ಬೂದಿ ಮುಚ್ಚಿದ ಕೆಂಡದಂತಿದ್ದ ಕಲ್ಯಾಣಿಯ ನೆನಪು ಧುತ್ತೆಂದು ಹೆಡೆಯೆತ್ತಿತ್ತು. ನಾನು ಎಂತಹ ದೊಡ್ಡ ತಪ್ಪು ಮಾಡಿದ್ದೆ! ವಿದ್ಯೆ ಕಲಿಸಿದ ಗುರುವಿನ ಬಗ್ಗೆ ಕೆಟ್ಟದಾಗಿ ಮಾತನಾಡುವಾಗ ಸ್ವಾರ್ಥಿಯಾಗಿಬಿಟ್ಟಿದ್ದೆನೇ? ಕುತಂತ್ರಿಯಾಗಿದ್ದೆನೇ? ಈ ತಪ್ಪಿಗೆ ಮರುಗದ ದಿನವಿಲ್ಲ. ಮಾಡಿರುವುದು ಅಕ್ಷಮ್ಯ ಅಪರಾಧ; ತೀರಾ ತಡವಾಗಿದೆ. ಅವನಲ್ಲಿ ಕ್ಷಮೆ ಕೇಳುವ ಪರಿ ತಿಳಿದಿಲ್ಲ.

★★★

'ಸರ್, ನಿಮ್ಮ ಊಹೆ ಸರಿ. ಅವರು ನೀವಂದುಕೊಂಡಂತೆ ಕಲ್ಯಾಣ ರಾಮ್, ಹುಡುಗನ ಕಡೆ ಸಂಬಂಧವಂತೆ. ಸ್ವಲ್ಪ ಅವಸರದಲ್ಲಿದ್ದರು' ಎಂದು ಈಶ್ವರ್ ಒಂದೇ ಉಸುರಿಗೆ ಹೇಳಿದಾಗ ಸ್ವಲ್ಪ ಹಾಯೆನಿಸಿತು. ಕಲ್ಯಾಣಿ ಅಂತ ಗೊತ್ತಾಯ್ತು, ನೋಡೋಣ ಎಂದುಕೊಂಡೆ. ಮುಂದಿನ ಐದು ನಿಮಿಷಕ್ಕೆ ಕಲ್ಯಾಣಿಯೇ ನನ್ನ ಪಕ್ಕದ ಚೇರಿನಲ್ಲಿ ಕುಳಿತು, 'ಜಗನ್ನಾಥ್? ಜಗ್ಗು?' ಎಂದು ಕೈ ಚಾಚಿದಾಗ ಕಣ್ಣರಳಿಸುತ್ತ ಕೈ ಕುಲುಕಿದೆ.

'ಹುಡುಗ ನನಗೆ ಹತ್ತಿರದ ಸಂಬಂಧ.'

'ಹುಡುಗಿ ಅಣ್ಣ ನನ್ನ ಕಲೀಗ್.'

ಮತ್ತೆ ಹೇಗೆ ಮಾತನಾಡಬೇಕೋ ತಿಳಿಯದೇ ಚಡಪಡಿಸಿದೆ. 'ಕಲ್ಯಾಣಿ ನನ್ನನ್ನು ಕ್ಷಮಿಸ್ತೀಯಾ? ನಾನು ನಿನಗೆ ದ್ರೋಹ ಮಾಡಿದೆ.' – ಇಲ್ಲ, ಮಾತುಗಳು ದನಿಯಾಗುತ್ತಿಲ್ಲ.

'ಒಂದೈದು ನಿಮಿಷ ಹೊರಗೆ ಹೋಗೋಣ್ವಾ' ಎಂದೆ. 'ಸರಿ ನಡಿ' ಎಂದ. ನೇರ ನನ್ನ ರೂಮಿಗೆ ಕರೆದೊಯ್ದು ಬಾಗಿಲು ಸ್ವಲ್ಪ ಮುಂದಕ್ಕೆ ಮಾಡಿ ಧೈರ್ಯ ಮಾಡಿಯೇ ಬಿಟ್ಟೆ – 'ನಾನು ತುಂಬಾ ದೊಡ್ಡ ತಪ್ಪು ಮಾಡಿದ್ದೀನಿ – ನಿನ್ನ, ವಸಂತನ ವಿಷಯದಲ್ಲಿ. ನಿನ್ನ ಹೊಟ್ಟೆಗೆ ಹೊಡೆದಿದ್ದೆ,ಗುರುದ್ರೋಹ ನನ್ನದು...' ಒಂದೇ ಸಮನೆ ಬಡಬಡಿಸಿದೆ; 'ನನ್ನನ್ನು ಕ್ಷಮಿಸು' ಬಿಕ್ಕಿದೆ. ಒಂದಷ್ಟು ಹೊತ್ತು ನಿಶ್ಯಬ್ದ.

'ನೀನು ನಿಮಿತ್ತವಷ್ಟೇ' ಕಲ್ಯಾಣಿ ಮೌನ ಮುರಿದ. 'ಆದರೂ ಅಷ್ಟು ದಿನ ನಿಮ್ಮ ಅನ್ನ ಉಂಡಿದ್ದೇನೆ. ಅದೃಷ್ಟವೋ ಏನೋ ಆ ಘಟನೆ ನಡೆಯುತ್ತಿದ್ದಂತೆ ನನಗೆ ಸಂಜೆ ನಾಲ್ಕು ಗಂಟೆ ದುಡಿಯಲು ಪಾರ್ಟ್ ಟೈಮ್ ಕೆಲಸವೊಂದು ಸಿಕ್ಕಿತು. ತುತ್ತಿಗೆ, ಮನೆಗಳ ದಡತಾಕುವ ಸಂಕಟದಿಂದ ಬಿಡುಗಡೆಯಾಯ್ತು. ಪದವಿ ಕೈಗೆ ಸಿಗುವ ಮೊದಲೇ ಬ್ಯಾಂಕ್ ಉದ್ಯೋಗ ದೊರಕಿತು. ನಂತರ ಹಂತ ಹಂತವಾಗಿ ಮೇಲೇರಿ ಈಗ ವಲಯ ಪ್ರಬಂಧಕನಾಗಿದ್ದೇನೆ. ಇದು ನನ್ನ ವಿಸಿಟಿಂಗ್ ಕಾರ್ಡ್.'

ನಾನು ತಲೆತಗ್ಗಿಸಿಯೇ ಇದ್ದೆ

'ಗಿವ್ ಮಿ ಎ ಹಗ್' ಕಲ್ಯಾಣಿ ಮಾತು ಮುಗಿಸುವಷ್ಟರಲ್ಲಿ ಅವನ ಅಪ್ಪುಗೆಯಲ್ಲಿ ಮತ್ತೆ ಬಿಕ್ಕಿದೆ.

'ವಸಂತಕ್ಕ?' ಕಣ್ಣೊರಿಸಿಕೊಂಡೆ.

'ವಸಂತ ಒಳ್ಳೆ ಹುಡುಗಿ, ಅವಳು ಮದುವೆಯಾಗಿ ಮೈಸೂರಿನಲ್ಲಿದ್ದಾಳೆ. ಅವಳ ಚಿಕ್ಕತ್ತೆ ಮಗಳೇ ನನ್ನ ಮಡದಿ. ನಿನಗೊಂದು ವಿಷಯ ಗೊತ್ತಾ? ಅವಳು ತಾನು ಮೆಚ್ಚಿದ್ದ ಹುಡುಗನನ್ನೇ ಮದುವೆಯಾದಳು – ಅವರ ಅಪ್ಪ ಅಮ್ಮನನ್ನು ಎದುರು ಹಾಕಿಕೊಂಡು. ಹುಡುಗ ಅವಳ ಕಾಲೇಜಿನಲ್ಲಿ ಸೀನಿಯರ್. ಅವಳ ಮದುವೆಗೆ ಸಾಕ್ಷಿ ಹಾಕಿದ್ದೇ ನಾವು. ಅವನೀಗ ದೊಡ್ಡ